# ಅನಪೇಕ್ಷಿತ ಕೂದಲಿಗೆ ಮನೆಯಲ್ಲಿದೆ ಪರಿಹಾರ

ದೇಹದಲ್ಲಿ ಅನಗತ್ಯ ಮತ್ತು ಅನಪೇಕ್ಷಿತ ಕೂದಲು ಸೌಂದರ್ಯಕ್ಕೆ ಧಕ್ಕೆ ಉಂಟು ಮಾಡುತ್ತದೆ. ಇದನ್ನು ನಿರ್ಮೂಲನೆ ಮಾಡಿದರೆ ಸೌಂದರ್ಯ ಕಾಪಾಡಿಕೊಳ್ಳಬಹುದು. ಇದಕ್ಕೂ ಮನೆಯಲ್ಲೇ ಪರಿಹಾರ ಕ್ರಮಗಳಿವೆ.

■ ಪ. ರಾಮಕೃಷ್ಣ ಶಾಸ್ತ್ರಿ

ಕೋಮಲಾಂಗಿಯರಿಗೆ ಅನಪೇಕ್ಷಿತ ಸ್ಥಳಗಳಲ್ಲಿ ಕಾಣಿಸುವ ಕೂದಲುಗಳು ತುಂಬ ಕಿರಿಕಿರಿಯುಂಟು ಮಾಡುತ್ತವೆ. ಗಲ್ಲ, ಮೂಗಿನ ಕೆಳಗೆ, ತೋಳುಗಳು, ಕಾಲುಗಳು ಮೊದಲಾದೆಡೆಗಳಲ್ಲಿ ಅವು ಇದ್ದರೆ ಮನಸ್ಸಿಗೆ ಒಂದು ವಿಧದ ಚಿಂತೆಯುಂಟಾಗುತ್ತದೆ. ಹೀಗೆ ಕೂದಲುಗಳುಂಟಾಗಲು ಹಾರ್ಮೋನ್ ವ್ಯತ್ಯಾಸ, ಋತುಚಕ್ರದ ಏರುಪೇರು, ಗರ್ಭಕೋಶದ ತೊಂದರೆಗಳೂ ಕಾರಣವಾಗುತ್ತವೆ. ಬೇಡದ ಕೂದಲಿಗೆ ವಿದಾಯ ಹೇಳಲು ರೇಜರನ್ನು ಬಳಸಿದರೆ ಅವು ಮತ್ತೆ ಮತ್ತೆ ಹುಟ್ಟುತ್ತಲೇ ಇರುತ್ತವೆ. ಕಠಿಣ ರಾಸಾಯನಿಕಗಳಿರುವ ಹೇರ್ ರಿಮೂವರ್ ಉಪಯೋಗಿಸಿದರೆ ಚರ್ಮದ ಆ ಭಾಗ ಶಾಶ್ವತವಾಗಿ ಕಪ್ಪಾಗಿ ಉಳಿಯುತ್ತದೆ. ಕೆಲವರಿಗೆ ಅದು ಅಲರ್ಜಿಯೂ ಆಗುವುದುಂಟು. ಕೂದಲುಗಳ ಪೀಡೆಯನ್ನು ಎಲೆಕ್ಟ್ರೋಸಿಸ್ ವಿಧಾನದಿಂದ ಶಾಶ್ವತವಾಗಿ ತೊಲಗಿಸಬಹುದಾದರೂ ತುಂಬ ವೆಚ್ಚವಾಗುತ್ತದೆ, ನೋವೂ ಆಗುತ್ತದೆ. ಹೀಗಾಗಿ ಸುಲಭವಾಗಿ ಮನೆಯಲ್ಲಿಯೂ ರೋಮನಾಶಕಗಳನ್ನು ತಯಾರಿಸಿ ಅಂಗಾಂಗಗಳನ್ನು ಕೋಮಲಗೊಳಿಸಬಹುದು.

ಸುಲಭವಾಗಿ ತಯಾರಿಸಬಹುದಾದ ರೋಮನಾಶಿನಿ ಎಂದರೆ ಲಿಂಬೆರಸ ಮತ್ತು ಜೇನು ತುಪ್ಪದ ಸಮ್ಮಿಶ್ರಣ. ತಲಾ ಎರಡನ್ನೂ ಸಮಭಾಗ ತೆಗೆದುಕೊಂಡು ದಪ್ಪ ಪೇಸ್ಟ್ ತಯಾರಿಸಬೇಕು. ರೋಮಗಳಿರುವ ಭಾಗಕ್ಕೆ ಲೇಪಿಸಿ ಇಪ್ಪತ್ತು ನಿಮಿಷಗಳ ಬಳಿಕ ತಣ್ಣೀರನ್ನು ಸವರಿ ತೊಳೆಯಬೇಕು. ವಾರದಲ್ಲಿ ಎರಡು ಮೂರು ದಿನಗಳ ಕಾಲ ಒಂದೆರಡು ತಿಂಗಳು ಹೀಗೆ ಮಾಡುವುದರಿಂದ ಚರ್ಮಕ್ಕೆ ಏನೂ ಹಾನಿ ಮಾಡದೆ ಕೂದಲುಗಳು ಬುಡದಿಂದಲೇ ಖಾಲಿಯಾಗುತ್ತವೆ.

ಅನಪೇಕ್ಷಿತ ಕೂದಲುಗಳು ಅಧಿಕ ದಟ್ಟವಾಗಿದ್ದರೆ ಈ ಮಿಶ್ರಣ ಸಾಲುವುದಿಲ್ಲ. ಇದಕ್ಕೆ ಸಕ್ಕರೆ, ಜೋಳದ ಗಂಜಿ ಅಥವಾ ಹಿಟ್ಟು, ಬೆಣ್ಣೆ ಮತ್ತು ಬಿಸಿ ಮಾಡಿ ಕರಗಿಸಿದ ಜೇನುಮೇಣವನ್ನು ಸೇರಿಸಿ ಲೇಪನ ತಯಾರಿಸಬೇಕು. ಕೂದಲುಗಳ ಬುಡದ ತನಕ ದಪ್ಪವಾಗಿ ಲೇಪಿಸಿ ಸ್ವಲ್ಪ ಹೊತ್ತಿನ ಅನಂತರ ಒದ್ದೆಯಿರುವ ಬಟ್ಟೆಯಿಂದ ಸವರಿ ತೆಗೆಯಬೇಕು. ಕೆಲವು ದಿನ ಹೀಗೆ ಮಾಡುವುದರಿಂದ ಅಲ್ಲಿರುವ ಕೂದಲು ಮಾಯವಾಗಿ ಸ್ನಿಗ್ಧವಾದ ತ್ವಚೆ ನಿಮ್ಮದಾಗುತ್ತದೆ.

ಕಾಕಂಬಿ, ಜೋಳದ ಗಂಜಿ, ಸಕ್ಕರೆ, ಜೇನುತುಪ್ಪಗಳನ್ನು ಬೆರೆಸಬೇಕು. ಬೇಯಿಸಿ ಮ್ಯಾಶ್ ಮಾಡಿದ ಆಲೂಗೆಡ್ಡೆ ಮತ್ತು ಹಳದಿ ಲೆಂಟಿಲ್‌ಗಳನ್ನು ಮಥನ ಮಾಡಿ ಇದಕ್ಕೆ ಸೇರಿಸಿ ಲಿಂಬೆರಸ ಹಿಂಡಬೇಕು. ಅನಪೇಕ್ಷಿತ ಕೂದಲುಗಳನ್ನು ಬೇರಿನೊಂದಿಗೆ ಕಿತ್ತು ತೆಗೆಯಲು ಇದರ ಲೇಪನವು ಪರಿಣಾಮಕರವಾದ ಅಸ್ತ್ರವಾಗಿದೆ.

ಸ್ಪಟಿಕವೂ ಕೂಡ ಕೂದಲುಗಳನ್ನು ಕಿತ್ತು ಸುಲಭವಾಗಿ ತೆಗೆಯಲು ನೆರವಾಗುತ್ತದೆ. ಮೂರು ಚಮಚ ಪನ್ನೀರಿನಲ್ಲಿ ಸ್ಪಟಿಕದ ಹುಡಿಯನ್ನು ಕರಗಿಸಿ ಕೂದಲಿನ ಬುಡದವರೆಗೂ ಲೇಪಿಸಬೇಕು. ಕೆಲವು ನಿಮಿಷಗಳು ಕಳೆದ ಮೇಲೆ ಆಲಿವ್ ಅಥವಾ ಎಳ್ಳೆಣ್ಣೆಯನ್ನು ಆ ಭಾಗಕ್ಕೆ ಸವರಬೇಕು. ಬಲು ಬೇಗನೆ ಅನಪೇಕ್ಷಿತ ಕೂದಲುಗಳು ತೊಲಗಿ ನಯವಾದ ತ್ವಚೆಯನ್ನು ಹೊಂದಲು ಇದು ಸಹಾಯಕವಾಗಿದೆ.

ಜೋಳದ ಹಿಟ್ಟಿನಿಂದಲೂ ಅನಗತ್ಯ ಕೂದಲಿನ ನಿವಾರಣೆ ಮಾಡಲು

